ಅಧ್ಯಕ್ಷರು :- ಪ್ರಸ್ತಾವವೇನೆಂದರೆ :- " ಮೈಸೂರು (ಧಾರ್ಮಿಕ ಮತ್ತು ಧರ್ಮಾದಾಯ) ಇನಾಮುಗಳ ರದ್ದಿಯಾತಿ (ಕರ್ನಾಟಕ ತಿದ್ದುಪಡಿ) ವಿಧೇಯಕ 1995 ನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ 2 ಪ್ರಸ್ತಾವ ಏನೆಂದರೆ :-

ಅಧ್ಯಕ್ಷರು :- "ಖಂಡ 2 ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(**ಖಂಡ 2 ಅನ್ನು** ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ :-

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

1.20 ಪಿ. ಎಂ

ಪ್ರಸ್ತಾವದ ಅಂಗೀಕಾರ

ಶ್ರೀ ಆರ್. ಎಲ್. ಜಾಲಪ್ಪ (ಕಂದಾಯ ಸಚಿವರು) :- ಮಾನ್ಯ ಅಧ್ಯಕ್ಷರೇ, 1995ರ ಮೈಸೂರು (ಧಾರ್ಮಿಕ ಮತ್ತು ಧರ್ಮಾದಾಯ) ಇನಾಮುಗಳ ರದ್ದಿಯಾತಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ : "1995 ರ ಮೈಸೂರು (ಧಾರ್ಮಿಕ ಮತ್ತು ಧರ್ಮಾದಾಯ) ಇನಾಮುಗಳ ರದ್ದಿಯಾತಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು".

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(2) ಕರ್ನಾಟಕ ವಿಶೇಷ ನ್ಯಾಯಾಧಿಕರಣ (ತಿದ್ದುಪಡಿ) ವಿಧೇಯಕ, 1995

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಆರ್. ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು) :- ಮಾನ್ಯ ಅಧ್ಯಕ್ಷರೇ, 1995ರ ಕರ್ನಾಟಕ ವಿಶೇಷ ನ್ಯಾಯಾಧಿಕರಣ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು.

ಅಧ್ಯಕ್ಷರು :- ವಿವರಣೆ ಏನಾದರೂ ಹೇಳಿ.

ಶ್ರೀ ಆರ್. ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು) :- ಮಾನ್ಯ ಅಧ್ಯಕ್ಷರೇ, ಈಗಾಗಲೇ ಇದು ತಿದ್ದುಪಡಿಯಾಗಿದೆ. ನಾವು ಕನ್ನಡದಲ್ಲಿ ಏನು ತಿದ್ದುಪಡಿಯನ್ನು ಸೂಚಿಸಿದ್ದೆವು ಸೆಕ್ಷನ್ 12 ಕ್ಕೆ, ಅದು ಇಂಗ್ಲೀಷ್‌ನಲ್ಲಿ ಅಕಸ್ಮಾತಾಗಿ ಕೈಬಿಟ್ಟುಹೋಗಿತ್ತು. ಈಗ ಅದನ್ನು ಇಂಗ್ಲೀಷ್‌ನಲ್ಲಿ ಅಳವಡಿಸಿದ್ದೇವೆ. ಅಷ್ಟೇನೇ ಬೇರೇ ಏನೂ ವ್ಯತ್ಯಾಸವಿಲ್ಲ.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ "1995ರ ಕರ್ನಾಟಕ ವಿಶೇಷ ನ್ಯಾಯಾಧಿಕರಣ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಅಧ್ಯಕ್ಷರು :- "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ :

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಆರ್. ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು) :- ಮಾನ್ಯ ಅಧ್ಯಕ್ಷರೇ,

"1995ರ ಕರ್ನಾಟಕ ವಿಶೇಷ ನ್ಯಾಯಾಧಿಕರಣ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆಯನ್ನು ನೀಡ ಲಾಯಿತು.

ಅಧ್ಯಕ್ಷರು :- ಈಗ ಗಮನ ಸೆಳೆಯುವ ಸೂಚನೆಗಳು 351 ಮತ್ತು ಮಂಡ್ಯ ಜಿಲ್ಲೆಯ ಸನ್ಮಾನ್ಯ ಶಾಸಕ ಮಿತ್ರರುಗಳು ಪ್ರಸ್ತಾಪಿಸಿರುವ ವಿಷಯವನ್ನು ಊಟದ ನಂತರ ತೆಗೆದುಕೊಳ್ಳ ಲಾಗುವುದು.

ವಿಷಯ :- ಕರ್ನಾಟಕ ಆಗ್ರೋ ಇಂಡಸ್ಟ್ರೀಯಲ್ಲಿ ಆಗುತ್ತಿರುವ ನಷ್ಟದ ಬಗ್ಗೆ.

+**ಶ್ರೀ ಜಿ. ಬಿ. ಶಿವಕುಮಾರ್ :-** ಮಾನ್ಯ ಅಧ್ಯಕ್ಷರೇ, ನಾನು ಶೂನ್ಯವೇಳೆಯಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಉಪಾಧ್ಯಕ್ಷರ ಅಪ್ಪಣೆಯನ್ನು ಕೂಡ ಪಡೆದಿದ್ದೆ. ನಮ್ಮ ವ್ಯವಸಾಯ ಸಚಿವರು ಇಲ್ಲಿದ್ದಾರೆ. ಒಂದೇ ಒಂದು ನಿಮಿಷ ಅವಕಾಶ ಕೊಡಬೇಕು. ಕರ್ನಾಟಕ ಆಗ್ರೋ ಇಂಡಸ್ಟ್ರೀಸ್‌ದು ಏನೆಂದರೆ ತಾವು ಕೂಡ ಸಾರ್ವಜನಿಕ ಉದ್ದಿಮೆಗಳ ಅಧ್ಯಕ್ಷರಾಗಿದ್ದಂಥವರು. ನಾನು ವಿಧಾನಪರಿಷತ್ತಿನಲ್ಲಿ ಈ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಬಗ್ಗೆ ಸುಮಾರು ಮೂರು ಬಾರಿ ಪ್ರಸ್ತಾಪ ಮಾಡಿದ್ದೆ. ಇವತ್ತು ಯಾವ ಒಂದು ಸಂಸ್ಥೆ ರೈತರಿಗೋಸ್ಕರ, ಅವರ ಉದ್ಧಾರಕ್ಕೋಸ್ಕರ ಸುಮಾರು ಕಳೆದ ಇಪ್ಪತ್ತೈದು ವರ್ಷದ ಹಿಂದೆ ಪ್ರಾರಂಭವಾಯಿತೋ ಇವತ್ತು ರೈತರ ಪಾಲಿಗೆ ಶಾಪವಾಗಿರುವುದು ನಮ್ಮ ಮಾನ್ಯ ಸಚಿವರಿಗೆ ಗೊತ್ತಿದೆ. ತಮ್ಮ ಮೂಲಕ ನಾನು ಮಾನ್ಯ ಕೃಷಿ ಸಚಿವರನ್ನು ಕೇಳುತ್ತೇನೆ. ಬಹುಶಃ ಇವರು ಐದನೇ ಮಂತ್ರಿಯವರು ನಾನು ಪ್ರಸ್ತಾಪಮಾಡುತ್ತಿರುವಂಥದ್ದು. ಮೊದಲಿಗೆ ಕೆ. ಹೆಚ್. ಪಾಟೀಲರು ವ್ಯವಸಾಯ ಸಚಿವರಾಗಿದ್ದರು, ಆಮೇಲೆ ಪುಟ್ಟಸ್ವಾಮಿಗೌಡರು, ಆಮೇಲೆ ಚಿಕ್ಕೇಗೌಡರು, ಆಮೇಲೆ ಹೆಚ್. ಕೆ. ಪಾಟೀಲರು, ಈಗ ನಮ್ಮ ಸರ್ಕಾರ ಇದೆ, ನಮ್ಮ ಮಂತ್ರಿಗಳು ಇದ್ದಾರೆ. ನನಗೆ ಒಂದು ವಿಶ್ವಾಸ ಇದೆ. ಅವರು ಬಹಳ ಕಠಿಣ ಮನಸ್ಸಿನ ವ್ಯಕ್ತಿ, ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಬಹುದು, ಜೊತೆಗೆ ತಾವು ಅಧ್ಯಕ್ಷರಾಗಿರುವುದು ಒಂದು ಅದೃಷ್ಟವೇ. ಏಕೆಂದರೆ ತಾವು ಸಾರ್ವಜನಿಕ ಉದ್ದಿಮೆ ಸಮಿತಿಯ ಅಧ್ಯಕ್ಷರಾಗಿ ಇದರ ಯೋಗ್ಯತೆಯನ್ನು ಸಾಕಷ್ಟು ಬರೆದಿದ್ದೀರಿ. ಇವತ್ತು ಯಾವ ಒಂದು ಸಂಸ್ಥೆ ರೈತರಿಗೆ ಉಪಯೋಗವಾಗಬೇಕಾದಂಥ ಸಂಸ್ಥೆ ಕೋಟ್ಯಾಂತರ ರೂಪಾಯಿಗಳ ನಷ್ಟ ಅನುಭವಿಸಿದೆ. ಜೊತೆಗೆ ಅಲ್ಲಿ ಮತ್ತೊಂದು ಏನೆಂದರೆ ಯಾರು ನ್ಯಾಯವನ್ನು ಪ್ರತಿಪಾದನೆ ಮಾಡಿದಂಥ ಕಾರ್ಮಿಕರನ್ನು ಅಮಾನತ್ತಿನಲ್ಲಿಟ್ಟಿದ್ದಾರೆ. ನಾನು ಇದರ ಬಗ್ಗೆ ಸವಿಸ್ತಾರವಾಗಿ ಮಾನ್ಯ ಕೃಷಿ ಸಚಿವರಿಂದ ಆ ಒಂದು ಹೇಳಿಕೆ ಬರಬೇಕು ಎಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :- ಊಟದ ನಂತರ ಸನ್ಮಾನ್ಯ ಮಂತ್ರಿಗಳು ವಿವರವಾದಂಥ ಉತ್ತರವನ್ನು ಕೊಡುತ್ತಾರೆ. ಅವರಿಗೆ ಕಠಿಣ ಮನಸ್ಸು ಇಲ್ಲ. ಬಹಳ ಮೆದು ಮನಸ್ಸು ಕ್ರಮ ಕಠಿಣವಾಗಿರು ತ್ತದೆ. ಸಭೆಯನ್ನು ಈಗ ಮುಂದೂಡಿ ಪುನಃ 3 ಗಂಟೆಗೆ ಸಮಾವೇಶಗೊಳ್ಳುತ್ತೆ.

(ಸಭೆಯು 1-26 ಕ್ಕೆ ಮುಂದೂಡಲ್ಪಟ್ಟಿತು. ಪುನಃ ಸದನವು 3 ಗಂಟೆಗೆ ಸಮಾವೇಶಗೊಳ್ಳುವುದು.)

(ಸಭೆಯು ಮದ್ಯಾಹ್ನ 3-30 ನಿಮಿಷಕ್ಕೆ ಸಮಾವೇಶಗೊಂಡಿತು)